ತಮ್ಮದೇನರೆ ಇದ್ರ ನೀವು ಕೀಳು ಜಾತಿಯವರು ಅಂತಾರ, ಮುಸ್ಲಿಮರ ಕಡೆಗೆ ವಾಲಿದರ ಹಿಂದೂಗಳಂತಾರ ಛೇ.. ಎಂದು ಪ್ರಕಾಶ ಸುಮ್ಮನಾದ. 'ಹಿಂದೂ ಮುಸ್ಲಿಮ್ ಜಗಳ ಬಂದಾಗ ನಿಮ್ಮನ್ರು ಹಿಂದೂಗಳಾಗುತ್ತಾರೆ, ಹಿಂದೂ-ಮುಸ್ಲಿಂ ಗಲಭೆಗಳು ಇಲ್ಲವೆಂದರೆ ನಿಮ್ಮನ್ರು ಅಸ್ಪೃಶ್ಯರಾಗುತ್ತಾರೆ' ಎಂದು ಹೇಳಿದ ಬಾಬಾಸಾಹೇಬರ ಮಾತು ಅಪ್ಪಟ ಸತ್ಯವೆಂದು ಪ್ರಕಾಶ ಮನನ ಮಾಡಿಕೊಂಡ.

ಅಷ್ಟರಲ್ಲಿ ಜವಾನ ಬಂದು, 'ಉರ್ದು ವಿಷಯದವರು ಯಾರಿದ್ದೀರಿ ಬನ್ನಿ' ಎಂದು ಕರೆದಾಗ ಪ್ರಕಾಶ ಎದ್ದು ಹೋಗಿ ಸರದಿಯಲ್ಲಿ ಕುಳಿತುಕೊಂಡ. ಇನ್ನೊಬ್ಬ ಬಂದು ಪ್ರಕಾಶನ ಪಕ್ಕದಲ್ಲಿ ಕೂತ. ಇಬ್ಬರೂ ಸಂದರ್ಶನಕ್ಕೆ ಹಾಜರಾದರು. ಹುದ್ದೆ ರಿಜರ್ವೇಷನ್ನಿಗೆ ಇದ್ದಿದ್ದರಿಂದ ಪ್ರಕಾಶನಿಗೆ ನೌಕರಿ ಪಕ್ಕಾ ಆಯಿತು.

ಸಂಸ್ಥೆಯವರು ಹೇಳಿದಂತೆ ಪ್ರಕಾಶ ಮಾರನೆಯದಿನ ನೌಕರಿಗೆ ಹಾಜರಾದ. ತರಗತಿಗಳ ಹಂಚಿಕೆಯೂ ಆಯಿತು. ಮುಸ್ಲಿಮರಿಗಿಂತ ಮುಸ್ಲಿಮರಲ್ಲದವರಿಗೆ ಗುಡಂತರ ಬಿದ್ದಿತು. ವರಾಂಡದಲ್ಲಿ, ಕಾರಿಡಾರ್ನಲ್ಲಿ ಪ್ರಕಾಶ ತಿರುಗಾಡುವಾಗ, 'ಇವರು ಉರ್ದು ಮಾಸ್ತರ್, ಆದರ ಅವರು ರಿಜರ್ವೇಷನದಾಗ ಬರ್ತಾರಂತ' ಎಂದೆಲ್ಲ ಮಾತಾಡ ಹತ್ತಿದ್ದರು. 'ಏನ್ ಮಾತಾಡ್ತಾರ ಮಾತಾಡಿಕೊಳ್ಳಲಿ, ನನ್ನ ಕೆಲಸ ನಾನು ಮಾಡಿಕೊಂಡು ಹೋದರಾಯಿತು' ಎಂದು ಪ್ರಕಾಶ ಟೀಕೆ ಟಿಪ್ಪಣಿಗಳೆಲ್ಲವನ್ನು ಸಹಿಸಿಕೊಂಡ. ಪತ್ರದ ಮೂಲಕ ಸುದ್ದಿಯನ್ನು ಅಪ್ಪ-ಅಮ್ಮನಿಗೆ ತಿಳಿಸಿದ. ಕೇರಿಯವರೆಲ್ಲ ಸಂಭ್ರಮದಲ್ಲಿ ತೇಲಾಡಿದರು. ಮುಲ್ಲಾ ಮಾಸ್ತರ್, ತಿಪ್ಪಣ್ಣನ ಮನೆಗೆ ಹೋಗಿ ಸಿಹಿತಿಂಡಿ ಹಂಚಿ ಬಂದರು. ಪ್ರಕಾಶ ತರಗತಿಗೆ ಹೋಗುವ ಕಾಲ ಬಂದಿರಲಿಲ್ಲ. ಒಂದೆರಡು ದಿನ ಕಳೆದ ಮೇಲೆ ವೇಳಾಪಟ್ಟಿ ಬೋರ್ಡಿಗೆ ಅಂಟಿಸಿದರು. ಪ್ರಕಾಶ ತರಗತಿಗೆ ಹೋಗಬೇಕು, ಹಿರಿಯ ಉರ್ದು ಪ್ರಾಧ್ಯಾಪಕ ರಬ್‌ಉಸ್ತಾದ್ ಬಂದು, 'ನೋಡ್ರಿ ಪ್ರಕಾಶ ಯಾವುದಕ್ಕೂ ಹೆದರಬೇಡಿ, ಪೂರ್ವಸಿದ್ಧತೆ ಇಲ್ಲದೆ ತರಗತಿಗೆ ಹೋಗಕೂಡದು. ಸಿದ್ಧತೆ ಮಾಡಿಕೊಂಡು ತರಗತಿಗಳಿಗೆ ಹೋಗಬೇಕು. ಕೆಲ ಹುಡುಗರು ಕಿತಾಪತಿ ಮಾಡತಾರ, ಎಲ್ಲವನ್ನು ಎದುರಿಸಿ ನಿಲ್ಲಬೇಕು' ಎಂದು ಧೈರ್ಯ ಹೇಳಿದರು.

'ಉರ್ದು ಕ್ಲಾಸಿಗೆ ಪ್ರಕಾಶ ಹೊರಟರು ಒಳಬರುತ್ತಿದ್ದಂತೆ, ಹುಡುಗರೆಲ್ಲ ಎದ್ದು ನಿಲ್ಲುತ್ತ ಸಲ್ಲಿಸಬೇಕಾದ ಗೌರವ ಸಲ್ಲಿಸಿ, ಇವರಿಗೇನು ಉರ್ದು ಬರ್ತದ ರಿಜರ್ವೇಷನದಾಗ ಬಂದಾರ' ಎಂಬ ಭಾವ ತರಗತಿಯ ಹುಡುಗರ ಮುಖದಲ್ಲಿ ವ್ಯಕ್ತವಾಗುವಂತಿತ್ತು. ಧೈರ್ಯವಂತ, ಮಾತುಗಾರ ಪ್ರಕಾಶ ವಿದ್ಯಾರ್ಥಿಗಳ ನಮಸ್ಕಾರ ಸ್ವೀಕರಿಸಿ ಉಭಯಕುಶಲೋಪರಿ ಮುಗಿಸಿದ. 'ಪಾಠ ಪ್ರಾರಂಭ ಮಾಡುವ ಮೊದಲು ನಿಮ್ಮಲ್ಲಿ ನನ್ನದೊಂದು ಪ್ರಶ್ನೆ ನೀವೆಲ್ಲ ಇಲ್ಲಿಯೇ ಹುಟ್ಟಿ ಬೆಳೆದವರು. ಬಹುತೇಕ ಇಲ್ಲಿಯ ವಿಷಯಗಳು ನಿಮಗ ಗೊತ್ತಿರಬೇಕು ಅನಕೊಂಡಿನಿ. ಅದ್ರು ನಿಮಗ ಕೆಲ ಪ್ರಶ್ನೆ ಕೇಳ್ತಿನಿ ನೀವು ಉತ್ತರ ಹೇಳಬೇಕು' ಎನ್ನುತ್ತಿದ್ದಂತೆ

'ಕೇಳಿ ಸರ್, ಕೇಳಿ' ಎಂದು ಕೆಲ ವಿದ್ಯಾರ್ಥಿಗಳು ಕುಹಕ ವ್ಯಕ್ತಿತ್ವ ಪ್ರದರ್ಶನ ಮಾಡಿದ್ದು ಪ್ರಕಾಶನಿಗೆ ಗೊತ್ತಾಯಿತು.

'ಹೌದು, ಇದು ಶೋರಾಪುರ, ಸುರಪುರ ಎಂದೆಲ್ಲ ಈಗ ಕರಿತಾರ. ಇಲ್ಲಿ ಟೈಲರ್ ಬಂಗ್ಲೆ ಇದೆ, ವಾಲ್ಮೀಕಿ ಸಮುದಾಯದವರು ಈ ಪ್ರದೇಶವನ್ನು ಆಳಿದ್ದಾರೆ, ಇದರ ಬಗ್ಗೆ ನಾ ಏನೂ ಕೇಳುವುದಿಲ್ಲ. ಉರ್ದು, ಉರ್ದು ಭಾಷೆ, ಉರ್ದು ಶಿಕ್ಷಕರ ಬಗ್ಗೆ ಕೇಳಬೇಕಾಗ್ಯಾದ' ಎಂದು ಪ್ರಕಾಶ ಸ್ವಲ್ಪ ಹೊತ್ತು ಮಾತು ನಿಲ್ಲಿಸಿ ಮೌನವಾಗಿ ನಿಂತುಕೊಂಡ. 'ನಿಜಾಂ ಆಡಳಿತದಲ್ಲಿ ಇಲ್ಲೊಬ್ರು ಮುಸ್ಲಿಮೇತರ ವ್ಯಕ್ತಿ ಪ್ರಸಿದ್ಧ ಉರ್ದು ಮಾಸ್ತರ್ ಆಗಿದ್ರು ನಿಮಗೇನರ ಗೊತ್ತದ'ಎಂದು ಪ್ರಕಾಶ ಪ್ರಶ್ನೆ ಮಾಡಿದರು.

'ಏನ್ ಸರ್ ಮುಸ್ಲಿಮರಲ್ಲದ ಮತ್ಯಾರು ಉರ್ದು ಕಲಿಯಲು ಸಾಧ್ಯ, ಪಾಠ ಮಾಡಲು ಹಿಂದೂಗಳೇಕೆ ಉರ್ದು ಓದಬೇಕು' ಎಂದು 'ಹೊ' ಎಂದು ನಕ್ಕರು. 'ನಿಮ್ಮ ನಗುವು ನನ್ನ ಪ್ರಶ್ನೆಗೆ ಉತ್ತರವಲ್ಲ! ಗೊತ್ತಿಲ್ಲವೆಂದು ಹೇಳಿದರೆ ಅದರ ಮಾಹಿತಿ ನಿಮಗೆ ನಾನು ಒದಗಿಸುತ್ತೇನೆ' ಎಂದು ಪ್ರಕಾಶ ಎಲ್ಲರತ್ತ ನೋಡಿದ. ಉತ್ತರವಿಲ್ಲದ ಎಲ್ಲರೂ ಮುಖ ಪೆಚ್ಚು ಮಾಡಿಕೊಂಡು ಕೂತರು.

'ಇರಲಿ ನಾನೇ ಇದೆಲ್ಲವನ್ನು ನಿಮಗೆ ಹೇಳುತ್ತೇನೆ. ಶಾಂತಚಿತ್ತರಾಗಿ ಕೇಳಬೇಕು' ಎಂದು ಪ್ರಕಾಶ ಹೇಳಿದ.

'ಆಗಲಿ ಜನಾಬ್ ಹೇಳ್ರಿ' ಎಂದು ಕುತೂಹಲದಿಂದ ಪ್ರಕಾಶನತ್ತ ನೋಡಿದರು.

'ನಿಜಾಂ ಆಡಳಿತದಲ್ಲಿ ಮಾತ್ರ ಭಾಷೆ ಉರ್ದು ಇತ್ತು.